ಶ್ರೀ ಎಚ್. ಎ. ಕೌಜಲಗಿ.—ಅದರಲ್ಲಿ ಕಾಯಿದೆಗೆ ಸಂಬಂಧಪಟ್ಟಹಾಗೆ ಕೆಲವು ಅಡಚಣೆಗಳು ಬರುತ್ತವೆ. ಅದ್ದರಿಂದ ಆ ಕಾಯಿದೆಯನ್ನು ತೆಡೆ ಹಿಡಿಯುವುದಕ್ಕಿಂತ ಹೊಸ ರೂಲ್ಸ್‌ನ್ನು ತೀವ್ರವಾಗಿ ಅಮಲಿನಲ್ಲಿ ತರುವುದು ಸೂಕ್ತ ಎಂದು ಕಾಣುತ್ತದೆ.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಸ್ವಾಮಿ ಈ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆಗಳೇನೂ ಬಂದಿರುವುದಿಲ್ಲ. ಎಂಟು ಮಂದಿ ಅಧಿಕಾರಿಗಳಿಂದ ಸಲಹೆಗಳು ಬಂದಿವೆಯೆಂದು ಹೇಳಿದ್ದೀರಿ, ಹಾಗಾದರೆ ಆ ಅಧಿಕಾರಿಗಳು ಏನು ಸಲಹೆಗಳನ್ನು ಕೊಟ್ಟಿದ್ದಾರೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಎ. ಕೌಜಲಗಿ.—ಇದು ಬಹಳ ದೊಡ್ಡ ಲಿಸ್ಟ್ ಇದೆ. ಅವರು ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ನೋಡಿ ಹೇಳಬೇಕಾಗುತ್ತದೆ.

Uniform Legislation for the Universities in the State

101. **Sri N. A. CHANNE GOWDA** (Pandavapura).—

Will the Minister for Education be pleased to state :—

the action taken so far and the steps that would be taken hereafter by the Government to bring uniform Legislation for the Universities in the State ?

Sri K. V. SHANKARA GOWDA (Minister for Education).—

Uniform Legislation for all Universities in the State is not desirable. The suggestion made by the Government of India to amend and modernise the University Acts, is under consideration.

ಶ್ರೀ ಎನ್. ಎ. ಚನ್ನೇಗೌಡ.—ರಾಜ್ಯದಲ್ಲಿರುವ ವಿಶ್ವವಿದ್ಯಾನಿಲಯಗಳಲ್ಲಿ ಸಿಂಡಿಕೇಟು ಮತ್ತು ಸೆನೆಟ್ಟಿನ ರಚನೆ, ಅಧಿಕಾರ ವ್ಯಾಪ್ತಿ ಮತ್ತು ಅಧಿಕಾರಿಗಳು ಹಾಗೂ ಪ್ರಾಧ್ಯಾಪಕರು ಇವರುಗಳ ನೇಮಕಾತಿ ಇತ್ಯಾದಿಗಳಿಗೆ ಸಂಬಂಧಪಟ್ಟ ರೀತಿ ನೀತಿಗಳ ವಿಷಯದಲ್ಲಿ ಏಕರೀತಿಯ ಶಾಸನ ವ್ಯಾಪ್ತಿಗೆ ಒಳಪಡಿಸುವುದು ಏಹಿತವಲ್ಲ ಎಂದು ಹೇಳಿದ್ದೀರಿ, ಹಾಗಾದರೆ ಅದರಲ್ಲಿ ಅಹಿತ ಏನಿದೆ ?

ಶ್ರೀ ಕೆ. ವಿ. ಶಂಕರಗೌಡ.—ಅದರಲ್ಲಿ ಅಹಿತವೇನೂ ಇಲ್ಲ. ಅದು ಹಿತವಲ್ಲ ಎಂದು ಹೇಳಿದ್ದೇನೆ.

ಶ್ರೀ ಎನ್. ಎ. ಚನ್ನೇಗೌಡ.—ಅಲ್ಲ ಬಹುರೂಪದ ಶಾಸನ ಇರುವುದರಿಂದ ಅಲ್ಲಿ ಒಂದು ಹೊಸ ಪಾಳೆಗಾರಿಕೆ ತಲೆಯೆತ್ತುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಅಂಥಾ ಪಾಳೇಗಾರಿಕೆಯೇನೂ ತಲೆ ಎತ್ತುತ್ತಾ ಇಲ್ಲ. ಒಂದೊಂದು ವಿಶ್ವವಿದ್ಯಾನಿಲಯದಲ್ಲಿ ಒಂದೊಂದು ವಿಧವಾದ ಪದ್ಧತಿ ವೈವಿಧ್ಯತೆ ಇವೆ. ಅದ್ದರಿಂದ ಎರಡಾ ವಿಶ್ವವಿದ್ಯಾನಿಲಯಗಳಿಗೂ ಅನ್ವಯವಾಗುವ ಹಾಗೆ ಏಕರೀತಿಯ ಶಾಸನವನ್ನು ತರುವುದು ಸಾಧುವಲ್ಲ ಎಂದು ಪರಿಗಣಿಸಲಾಗಿದೆ.

Sri B. P. GANGADHAR.—May I know the difficulties in the way of the Government to pass a suitable legislation so that all the Universities will come under a uniform statute so that there can be no difference between university and university ?

Sri K. V. SHANKARA GOWDA.—The answer has already been given, that it is not desirable to have such uniformity.

ಶ್ರೀ ಪಾಟೀಲ್ ನಾಗರಾಜ್.—ನಮ್ಮ ರಾಜ್ಯದಲ್ಲಿ ಇನ್ನು ಎಷ್ಟು ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ವಿದ್ಯಾ ಮಂತ್ರಿಗಳು ರಾಜ್ಯದಲ್ಲಿನ ವಿಶ್ವವಿದ್ಯಾನಿಲಯಗಳನ್ನು ಏಕರೀತಿಯ ಶಾಸನ ವ್ಯಾಪ್ತಿಗೆ ಒಳಪಡಿಸುವುದು ವಿಹಿತವಲ್ಲ ಎಂದು ಹೇಳಿದ್ದಾರೆ. ಹಾಗಾದರೆ ಯಾವ ಯಾವ ಕಾರಣಗಳಿಂದ ಅವುಗಳಿಗೆ ಏಕರೀತಿಯ ಕಾನೂನನ್ನು ಮಾಡುವುದಕ್ಕಾಗುವುದಿಲ್ಲ ಎಂಬುದನ್ನು ಹೇಳುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಒಂದೊಂದು ವಿಶ್ವವಿದ್ಯಾಲಯಕ್ಕೂ ಒಂದೊಂದು ರೀತಿಯ ಪದ್ಧತಿ ಮತ್ತು ಲಕ್ಷಣಗಳು ಇರುತ್ತವೆ. ಅದಕ್ಕನುಸಾರವಾಗಿ ಯೂನಿವರ್ಸಿಟಿಯು ಆಕ್ಟ್ ಇರುತ್ತದೆ. ಆದ್ದರಿಂದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಅನ್ವಯವಾಗುವ ಹಾಗೆ ಏಕರೂಪತಾ ಕಾನೂನನ್ನು ಮಾಡುವುದು ಸಾಧುವಲ್ಲ.

ಶ್ರೀ ಕೆ. ಎಚ್. ಪಾಟೀರ್.—ರಾಜ್ಯದಲ್ಲಿನ ವಿಶ್ವವಿದ್ಯಾನಿಲಯಗಳಲ್ಲಿ ಬೇರೆ ಬೇರೆ ರೀತಿಯ ಕಾಯಿದೆಗಳು ಇರುವುದರಿಂದ ಆ ವಿಶ್ವವಿದ್ಯಾನಿಲಯಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೂ, ನೌಕರ ವರ್ಗದವರಿಗೂ ಮತ್ತು ಇತರೆ ಜನಗಳಿಗೂ ಸರ್ಕಾರದಿಂದ ಡಿಸ್‌ಕ್ರಿಮಿನೇಟಿಂಗ್ ಟ್ರೀಟ್‌ಮೆಂಟ್ ಉಂಟಾಗುತ್ತದೆ. ಸರ್ಕಾರ ತನ್ನ ರಾಜಕೀಯ ಪ್ರಭಾವವನ್ನು ಬೆಳೆಸುವುದಕ್ಕೆ ಈ ರೀತಿ ನಾನಾ ಕಾಯಿದೆಗಳನ್ನು ಮಾಡಿದ್ದಾರೆಂಬುದು ನಿಜವೇ ?

ಶ್ರೀ ಕೆ. ವಿ. ಶಂಕರಗೌಡ.—ಅಲ್ಲಿ ಸರ್ಕಾರದವರಿಗೆ ವೆಸ್ಟೆಡ್ ಇಂಟರೆಸ್ಟ್ ಏನೂ ಇಲ್ಲ. ಅಯಾಯ ಸ್ಥಳದ ವಿದ್ಯಮಾನಗಳಿಗೆ ತಕ್ಕ ಹಾಗೆ ಕಾನೂನನ್ನು ಮಾಡಲಾಗಿದೆ. ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಅನ್ವಯವಾಗುವ ಹಾಗೆ ಏಕರೂಪತಾ ಕಾನೂನನ್ನು ತರುವುದು ಸಾಧುವಲ್ಲ.

Sri D. B. KALMANKAR.—May I know what is the suggestion made by the Government of India to amend and modernise the University Act ?

Sri K. V. SHANKARA GOWDA.—They are directed mainly towards appointment of Vice-Chancellor and constitution of various committees and curricula to be adopted.

ಶ್ರೀ ಕೆ. ಎಂ. ತಮ್ಮಯ್ಯ.—ಸಾಮಿ, ಒಂದೊಂದು ವಿಶ್ವವಿದ್ಯಾನಿಲಯಗಳಲ್ಲಿ ಒಂದೊಂದು ತರಹ ಆಡಳಿತ ಇರುವುದರಿಂದ ಮತ್ತು ಒಂದೊಂದು ರೀತಿಯ ಆರ್ಡಿನೆನ್ಸ್ ಇರುವುದರಿಂದ ವಿದ್ಯಾರ್ಥಿಗಳಲ್ಲಿ ಅಸಿನು ಕಂಡುಬರುತ್ತಿದೆ. ಆದ್ದರಿಂದ ಎಲ್ಲಾ ವಿಶ್ವವಿದ್ಯಾನಿಲಯಗಳನ್ನು ಒಂದೇ ತರಹದ ಶಾಸನ ವ್ಯಾಪ್ತಿಗೆ ಒಳಪಡಿಸುವುದು ಒಳ್ಳೆಯದಲ್ಲವೇ ?

ಶ್ರೀ ಕೆ. ವಿ. ಶಂಕರಗೌಡ.—ಆರ್ಡಿನೆನ್ಸ್‌ಗೂ ಏಕರೀತಿಯ ಶಾಸನವನ್ನು ತರುವುದಕ್ಕೂ ಸಂಬಂಧವಿಲ್ಲ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಒಂದೊಂದು ವಿಶ್ವವಿದ್ಯಾನಿಲಯಗಳಲ್ಲಿ ಒಂದೊಂದು ರೀತಿಯ ಗ್ರೇಸ್ ಮಾರ್ಕ್ಸ್ ಕೊಡುತ್ತಿರುವುದರಿಂದ ವಿದ್ಯಾರ್ಥಿಗಳಲ್ಲಿ ಭಿನ್ನಾಭಿಪ್ರಾಯ ಬರುವುದಕ್ಕೆ ಕಾರಣವಾಗುತ್ತದೆ. ಆದ್ದರಿಂದ ರಾಜ್ಯದಲ್ಲಿನ ವಿಶ್ವವಿದ್ಯಾನಿಲಯಗಳನ್ನು ಏಕರೀತಿಯ ಶಾಸನ ವ್ಯಾಪ್ತಿಗೆ ಒಳಪಡಿಸುವುದು ವಿಹಿತವಲ್ಲವೆ ?

Sri K. V. SHANKARA GOWDA.—We have suggested to have uniform courses of study and that is being considered by the various universities. So far as making everything uniform, it is felt that it is not desirable.